ರುಚಿಕರವಾದ ಉಪಹಾರ
ಸಿಹಿ–ಖಾರ ತಿಂಡಿಗಳು
**ನ್ಯೂ ಕೋರ್ಟ್ ರೆಸ್ಟೋರೆಂಟ್**
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ
ವಿಶ್ವಾಸನೀಯ ಸೇವೆಯಲ್ಲಿ
**ಶೇಟ್ ಜ್ಯುವೆಲ್ಲರ್ಸ್**
ಶಂಕರ್‌ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್: 230242

*ಸಂಪುಟ :25 *ಸಂಚಿಕೆ :13 * Udp/1263/2015-17 * R.NO. 50495/91 * ತಾರೀಕು 14–04–2015 * ರೂ 5/– * ವಾರ್ಷಿಕ ಚಂದಾ : 270/– ಅಂಚೆಯಲ್ಲಿ : 300/

## ಅಮಾಸೆಬೈಲಿನಲ್ಲಿ ಹಲವು ಯೋಜನೆಗಳ ಉದ್ಘಾಟನೆ



ಅಮಾಸೆಬೈಲು ಚಾರಿಟೇಬಲ್ ಟ್ರಸ್ಟ್ ಹಾಗೂ ಹಲವು ಸಂಸ್ಥೆಗಳು ಮತ್ತು ಸರಕಾರದ ಇಲಾಖೆಗಳ ಸಹಕಾರದಲ್ಲಿ ಅನುಷ್ಠಾನಗೊಂಡ ಹಾಗೂ ಅನುಷ್ಠಾನಗೊಳ್ಳಲಿರುವ ಯೋಜನೆಗಳ ಉದ್ಘಾಟನಾ ಕಾರ್ಯಕ್ರಮ ಅಮಾಸೆಬೈಲಿನಲ್ಲಿ ನಡೆಯಿತು. ( ವಿವರ 8ನೇ ಪುಟಕ್ಕೆ )

## ಹೆಗ್ಗಡೆ ಅಭಿನಂದನೆಗೆ ಕುಂದಾಪುರದಿಂದ ಎಂಟು ಸಾವಿರ ಮಂದಿ ಭಾಗಿ



ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಧರ್ಮಸ್ಥಳ ಧರ್ಮಾಧಿಕಾರಿ ಡಾ|ಡಿ.ವೀರೇಂದ್ರ ಹೆಗ್ಗಡೆಯವರಿಗೆ ಸಾರ್ವಜನಿಕವಾಗಿ ಸನ್ಮಾನಿಸಿ, ಗೌರವಿಸುವ ಕಾರ್ಯಕ್ರಮ ಮೂಡುಬಿದರೆಯಲ್ಲಿ ತಾ. 12 ರಂದು ರಾಜ್ಯಾದ್ಯಂತ ಆಗಮಿಸಿದ ಲಕ್ಷಾಂತರ ಮಂದಿ ಸಮ್ಮುಖದಲ್ಲಿ ನಡೆದಿದ್ದು, ಕುಂದಾಪುರ ತಾಲ್ಲೂಕಿನಿಂದ 8 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಿದ್ದರು.

ಕುಂದಾಪುರ ತಾಲ್ಲೂಕು ಜನಜಾಗೃತಿ ವೇದಿಕೆಯ ಅಧ್ಯಕ್ಷ ಬಿ.ಅಪ್ಪಣ್ಣ ಹೆಗ್ಡೆಯವರ ನೇತೃತ್ವದಲ್ಲಿ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಹಾಗೂ ಸ್ವ ಸಹಾಯ ಸಂಘಗಳ ಒಕ್ಕೂಟದ ಮುಖ್ಯಸ್ಥರ ಮಾರ್ಗದರ್ಶನದೊಂದಿಗೆ 94 ಬಸ್ಸುಗಳಲ್ಲಿ 48 ಮಿನಿ ಬಸ್ಸು, ಮೆಟಾಡೋರ್ ವಾಹನಗಳಲ್ಲಿ ತಾಲ್ಲೂಕಿನ ಬಹುತೇಕ ಗ್ರಾಮಗಳಿಂದ ಜನರು ಮೂಡಬಿದರೆಗೆ ತೆರಳಿದ್ದರು. ಅಲ್ಲದೇ ಖಾಸಗಿ ವಾಹನಗಳಲ್ಲಿ ನೂರಾರು ಮಂದಿ ಗಣ್ಯರು ತೆರಳಿ ಸಮಾರಂಭದಲ್ಲಿ ಪಾಲ್ಗೊಂಡರು.

ಕುಂದಾಪುರ ತಾಲ್ಲೂಕಿನ ಪರವಾಗಿ ಬಿ.ಅಪ್ಪಣ್ಣ ಹೆಗ್ಡೆಯವರು ಪದ್ಮವಿಭೂಷಣ ಡಿ.ವೀರೇಂದ್ರ ಹೆಗ್ಗಡೆಯವರಿಗೆ ಹಾರಾರ್ಪಣೆ ಮಾಡಿದರು.

## ಗುರುಕುಲದಲ್ಲಿ ಪೋಷಕರಿಗೆ ಉಚಿತ ಮಾಹಿತಿ ಕಾರ್ಯಾಗಾರ

ಕೋಟೇಶ್ವರದ ವಕ್ವಾಡಿಯ ಗುರುಕುಲ ಪಬ್ಲಿಕ್ ಸ್ಕೂಲ್‌ನಲ್ಲಿ ಉಚಿತ ಸೇತುಬಂಧ (Bridge Course) ಕಾರ್ಯಕ್ರಮ ಮೇ 5 ರಿಂದ ಮೇ 20 ರವರೆಗೆ ನಡೆಯಲಿದೆ , ಉಚಿತ ವಾಹನ ಸೌಲಭ್ಯ ಒದಗಿಸಲಾಗುತ್ತದೆ. ಈ ವಿಷಯಗಳನ್ನು ಒಳಗೊಂಡ ಮಾಹಿತಿ ಕಾರ್ಯಗಾರ ಎಲ್ಲಾ ೧೦ನೇ ತರಗತಿಯ ವಿದ್ಯಾರ್ಥಿಗಳ ಪೋಷಕರಿಗಾಗಿ ಶನಿವಾರ ೧೮ ರಂದು ಮದ್ಯಾಹ್ನ ೩ ಗಂಟೆಗೆ ಗುರುಕುಲದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಹಾಗೂ ಎಲ್ಲರನ್ನೂ ಈ ಪ್ರಕಟಣೆಯ ಮೂಲಕ ಆಹ್ವಾನಿಸಲಾಗಿದೆ.

## ಬಿ. ರಾಜೇಂದ್ರರಿಗೆ ಮುಖ್ಯಮಂತ್ರಿಗಳ ಗೌರವ ಪದಕ



**AXIS BANK**
Main Road, Near Abharana
Kundapura
Enjoy all modern Banking Facilities
at your Doorstep
Now 24 Hours Cash Deposit Service Available.
For Free Personalized Service
Please Call 8095511181
08254-235601 /2 /3

**'ಪದ್ಮ ವಿಭೂಷಣ' ಪುರಸ್ಕೃತ ಪೂಜ್ಯರಿಗೆ ಪ್ರಣಾಮ ಪೂರ್ವಕ ಅಭಿನಂದನೆಗಳು**



ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಜನಜಾಗ್ರತಿಯೊಂದಿಗೆ ಕ್ರಾಂತಿಯನ್ನೇ ಮಾಡಿ "ವಿಶ್ವಮಾನ್ಯ"ರೆನಿಸಿಕೊಂಡ, ಜನಸಾಮಾನ್ಯರ ಬದುಕಿನಲ್ಲಿ ಹೊಸಬೆಳಕನ್ನು ಹರಿಸಿ ರಾಜ್ಯಾದಂತ ಕೃಷಿಕರಲ್ಲಿ, ಬಡಜನರಲ್ಲಿ, ಉಲ್ಲಾಸ ಸ್ಪುರಿಸುವಂತೆ ಮಾಡಿದ ಪೂಜ್ಯರಾದ ಧರ್ಮಸ್ಥಳದ ಧರ್ಮಾಧಿಕಾರಿ ಡಾ|ಡಿ.ವೀರೇಂದ್ರ ಹೆಗ್ಗಡೆಯವರಿಗೆ ಮಾನ್ಯ ರಾಷ್ಟ್ರಪತಿಯವರು ದೇಶದ ಪದ್ಮವಿಭೂಷಣ ಪ್ರಶಸ್ತಿಯನ್ನು ಪ್ರದಾನ ಮಾಡಿರುವುದು ಅಪಾರ ಸಂತೋಷವನ್ನುಂಟು ಮಾಡಿದೆ.

ಪೂಜ್ಯರಿಗೆ ಪ್ರಣಾಮ ಸಲ್ಲಿಸುತ್ತಾ
ಹೃದಯ ಪೂರ್ವಕ ಅಭಿನಂದನೆ ಸಲ್ಲಿಸುವ

**ಪ್ರಥ್ವಿರಾಜ್ ಜೈನ್**
**ಬೊಳಂಬಳ್ಳಿ**
**ಕುಂದಾಪುರ ತಾಲೂಕು**